## 2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ,

## ಎಸ್.ಸಿ.ನಂಃ-315/2022

ಪಿ.ಡಬ್ಲ್ಯೂಃ- 1
ಸಿ.ಡಬ್ಲ್ಯೂಃ- 1

| | | |
|---|---|---|
| ಸಾಕ್ಷಿದಾರರ ಹೆಸರುಃ | : | ದೇವಿರಮ್ಮ |
| ಗಂಡನ ಹೆಸರುಃ | : | ನಂಜೇಗೌಡ |
| ವಯಸ್ಸುಃ | : | 65 ವರ್ಷ |
| ವೃತ್ತಿಃ | : | ಗೃಹಿಣಿ |
| ವಾಸಃ | : | ಕಿತ್ತನಕೆರೆ ಗ್ರಾಮ, ಹಾಸನ ತಾಃ |

**ದಿನಾಂಕಃ 20-12-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿ-1, 2 ಗೊತ್ತು. ಆರೋಪಿ-1 ಹಾಗೂ 2 ರವರು ನನ್ನ ಅಣ್ಣನಾದ 3ನೇ ಆರೋಪಿ ಪುಟ್ಟೇಗೌಡರ ಮಕ್ಕಳು. 3ನೇ ಆರೋಪಿತ ಪುಟ್ಟೇಗೌಡ ಈಗ ಜೀವಂತವಾಗಿಲ್ಲ. ನನ್ನ ಮಗಳಾದ ಚೈತ್ರಳನ್ನು 14 ವರ್ಷದ ಹಿಂದೆ 1ನೇ ಆರೋಪಿ ಜಗದೀಶ್ ರವರಿಗೆ ವಿವಾಹ ಮಾಡಿಕೊಡಲಾಗಿತ್ತು. ಸದರಿ ವಿವಾಹ ಸಂಬಂಧದಿಂದ ನನ್ನ ಮಗಳು ಚೈತ್ರ ಹಾಗೂ 1ನೇ ಆರೋಪಿ ಜಗದೀಶ್ ರವರಿಗೆ ಒಂದು ಗಂಡು ಮಗು ಇರುತ್ತದೆ. ಚಾಸಾ-2 ಮಮತ ನನ್ನ ಇನ್ನೊಬ್ಬ ಮಗಳು. ಚಾಸಾ-3 ಸತ್ಯನಾರಾಯಣ, ಚಾಸಾ-4 ಉಮೇಶ ನನಗೆ ಗೊತ್ತು. ಚಾಸಾ-5 ಸುಧಾ ಹಾಗೂ ಚಾಸಾ-6 ಕೀರ್ತಿ ಸಹ ನನಗೆ ಗೊತ್ತು. 1ನೇ ಆರೋಪಿ ಜಗದೀಶ್ ನನ್ನ ಮಗಳಾದ ಚೈತ್ರಳ

ಬಳಿ ವರದಕ್ಷಿಣೆ ಹಣ ಪಡೆದು ಬರುವಂತೆ ಕಿರುಕುಳ ನೀಡುತ್ತಿದ್ದ. ನಂತರ ನಾವು ಲಿಂಗಪ್ಪನಕೊಪ್ಪಲು ಗ್ರಾಮದಲ್ಲಿ ಪಂಚಾಯಿತಿ ಮಾಡಿ ನನ್ನ ಅಳಿಯ 1ನೇ ಆರೋಪಿ ಜಗದೀಶ್ ರವರಿಗೆ ಒಂದು ಲಕ್ಷ ರೂ. ಹಣವನ್ನು ವರದಕ್ಷಿಣೆಯಾಗಿ ಕೊಟ್ಟಿರುತ್ತೇವೆ. ಸದರಿ ಪಂಚಾಯಿತಿಯಲ್ಲಿ ನನ್ನ ಅಳಿಯ ಚಾಸಾ–4 ಉಮೇಶ್, ಚಾಸಾ–6 ಕೀರ್ತಿ ಹಾಗೂ ಚಾಸಾ–3 ಸತ್ಯನಾರಾಯಣರವರು ಸೇರಿದ್ದರು. ಪಂಚಾಯಿತಿ ಆದ ನಂತರ ಸಹ ಮೂರೂ ಜನ ಆರೋಪಿಗಳು ಸೇರಿಕೊಂಡು ನನ್ನ ಮಗಳಾದ ಚೈತ್ರಳಿಗೆ ಮತ್ತೆ ವರದಕ್ಷಿಣೆ ಪಡೆದು ಬರುವಂತೆ ಕಿರುಕುಳ ನೀಡುತ್ತಿದ್ದರು. ಆನಂತರ ನನ್ನ ಮಗಳಾದ ಚೈತ್ರಳು ನಮ್ಮ ಮನೆಗೆ ಬಂದು ಸುಮಾರು 2–3 ತಿಂಗಳು ನಮ್ಮ ಮನೆಯಲ್ಲಿಯೇ ಇದ್ದಳು. ನಂತರ ಅಮವಾಸ್ಯೆ ಹಬ್ಬ ಬಂದ ಕಾರಣ ಹಬ್ಬ ಮಾಡುವ ಬಗ್ಗೆ ಆರೋಪಿಗಳು ನನ್ನ ಮಗಳಾದ ಚೈತ್ರಳನ್ನು ಅವರ ಮನೆಗೆ ಲಿಂಗಪ್ಪನಕೊಪ್ಪಲು ಗ್ರಾಮಕ್ಕೆ ಕರೆಸಿಕೊಂಡರು. ನನ್ನ ಮಗಳು ಆರೋಪಿಗಳ ಮನೆಗೆ ಹೋದಾಗ ಆರೋಪಿಗಳು ನನ್ನ ಮಗಳು ಹೆಚ್ಚಿನ ವರದಕ್ಷಿಣೆ ಪಡೆದು ಬರಲಿಲ್ಲ ಎನ್ನುವ ಕಾರಣಕ್ಕಾಗಿ ಆಕೆಗೆ ಪೂಜೆ ಮಾಡಲು ಬಿಡಲಿಲ್ಲ ಹಾಗೂ ಹಬ್ಬ ಆಚರಿಸಲು ಸಹ ಬಿಡಲಿಲ್ಲ. ನನ್ನ ಮಗಳಾದ ಚೈತ್ರಳು ನನ್ನ ಇನ್ನೊಬ್ಬ ಮಗಳಾದ ತೇಜುರವರಿಗೆ ಫೋನ್ ಮಾಡಿ ಆರೋಪಿಗಳು ಆಕೆಗೆ ವರದಕ್ಷಿಣೆ ಹಣ ತೆಗೆದುಕೊಂಡು ಬಾರದ ಕಾರಣ ಪೂಜೆ ಮಾಡಲು ಬಿಡುತ್ತಿಲ್ಲ ಎನ್ನುವ ಬಗ್ಗೆ ತಿಳಿಸಿರುತ್ತಾಳೆ. ಹಬ್ಬ ಆದ ಮರುದಿನ ಬೆಳಿಗ್ಗೆ 6.30 ಗಂಟೆ ಸಮಯದಲ್ಲಿ 1ನೇ ಆರೋಪಿ ಜಗದೀಶ್ ಫೋನ್ ಮಾಡಿ ನನ್ನ ಮಗಳಾದ ಚೈತ್ರರವರು ನೇಣು ಹಾಕಿಕೊಂಡು ಮೃತಪಟ್ಟಿರುತ್ತಾಳೆ ಎಂದು ತಿಳಿಸಿರುತ್ತಾನೆ. ವಿಷಯ ತಿಳಿದ ನಾನು, ತೇಜ ಹಾಗೂ ನನ್ನ ಇತರೆ ಹೆಣ್ಣುಮಕ್ಕಳು ಹೋಗಿ ಲಿಂಗಪ್ಪನಕೊಪ್ಪಲು ಗ್ರಾಮದ ಆರೋಪಿಗಳ ಮನೆಯಲ್ಲಿ ನೋಡಿದಾಗ ನನ್ನ ಮಗಳು ಚೈತ್ರ ನೇಣು ಬಿಗಿದುಕೊಂಡು

ಸತ್ತಿರುತ್ತಾಳೆ ಎಂದು ಆರೋಪಿಗಳು ತಿಳಿಸಿದರು. ಆದರೆ ನನ್ನ ಮಗಳು ನೇಣು ಬಿಗಿದುಕೊಂಡು ಸಾಯುವ ಹೆಣ್ಣುಮಗಳಲ್ಲ. ಆರೋಪಿಗಳು ಸೇರಿ ನನ್ನ ಮಗಳಿಗೆ ಕಿರುಕುಳ ನೀಡಿ ಅವರೇ ನನ್ನ ಮಗಳಿಗೆ ನೇಣು ಬಿಗಿದು ಆಕೆಯ ಕೊಲೆ ಮಾಡಿರುತ್ತಾರೆ. ನಂತರ ನಾನು ಪೊಲೀಸ್ ಠಾಣೆಗೆ ಹೋಗಿ ಆರೋಪಿಗಳ ವಿರುದ್ಧ ನನ್ನ ದೂರನ್ನು ದಾಖಲಿಸಿರುತ್ತೇನೆ. ಸದರಿ ದೂರಿಗೆ ನನ್ನ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತೇನೆ. ಸಾಕ್ಷಿದಾರರು ಗುರುತಿಸಿದ ಅವರ ದೂರನ್ನು ನಿಪಿ–1 ಎಂದು ಗುರುತಿಸಲಾಯಿತು.

2. ಈಗ ನಾನು ನೋಡುತ್ತಿರುವ ಫೋಟೋ ನನ್ನ ಮಗಳ ವಿವಾಹ ಕಾಲದಲ್ಲಿ ತೆಗೆಯಲಾದ ಫೋಟೋ ಆಗಿರುತ್ತದೆ. ಸಾಕ್ಷಿದಾರರು ಗುರುತಿಸಿದ ಒಂದು ಫೋಟೋವನ್ನು ನಿಪಿ–2 ಎಂದು ಗುರುತಿಸಲಾಯಿತು. ಈಗ ನಾನು ನೋಡುತ್ತಿರುವ ಫೋಟೋ ನನ್ನ ಮಗಳ ಮೃತದೇಹದ ಫೋಟೋ ಆಗಿರುತ್ತದೆ. ಸಾಕ್ಷಿದಾರರು ಗುರುತಿಸಿದ ಇನ್ನೊಂದು ಫೋಟೋವನ್ನು ನಿಪಿ–3 ಎಂದು ಗುರುತಿಸಲಾಯಿತು. ನಿಪಿ–3 ರಲ್ಲಿ ಸಾಕ್ಷಿದಾರರು ಅವರ ಇರುವಿಕೆಯನ್ನು ಗುರುತಿಸಿರುತ್ತಾರೆ. ನಾನು ದೂರು ದಾಖಲಿಸಿದ ನಂತರ ಪೊಲೀಸರು ನನ್ನ ಮಗಳು ಮೃತಪಟ್ಟಿದ್ದ ಆರೋಪಿಗಳ ಮನೆಗೆ ಬಂದು ಮಹಜರ್ ತಯಾರಿಸಿರುತ್ತಾರೆ. ಸದರಿ ಮಹಜರಿಗೆ ನಾನು ನನ್ನ ಸಹಿಯನ್ನು ಮಾಡಿರುತ್ತೇನೆ. ಸಾಕ್ಷಿದಾರರು ಗುರುತಿಸಿದ ಸ್ಥಳಮಹಜರನ್ನು ನಿಪಿ–4 ಎಂದು ಗುರುತಿಸಲಾಯಿತು. ನಿಪಿ–4 ರಲ್ಲಿ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ–4(ಎ) ಎಂದು ಗುರುತಿಸಲಾಯಿತು. ನಿಪಿ–4 ಮಹಜರ್ ಕಾಲದಲ್ಲಿ ಪೊಲೀಸರು ತೆಗೆದ ಫೋಟೋ ಎಂದು ಸಾಕ್ಷಿದಾರರು ಗುರುತಿಸಿದ ಫೋಟೋವನ್ನು ನಿಪಿ–5 ಎಂದು ಗುರುತಿಸಲಾಯಿತು. ನಿಪಿ–5 ಫೋಟೋವಿನಲ್ಲಿ ಸಾಕ್ಷಿದಾರರು ಕೃತ್ಯ ನಡೆದ ಸ್ಥಳವನ್ನು ತೋರಿಸುತ್ತಿರುವ ಬಗ್ಗೆ ತಮ್ಮ

ಇರುವಿಕೆಯನ್ನು ಗುರುತಿಸಿರುತ್ತಾರೆ. ನಿಪಿ–4 ಮಹಜರ್ ಕಾಲದಲ್ಲಿ ನನ್ನ ಮಗಳಿಗೆ ನೇಣು ಬಿಗಿದಿದ್ದ ತುಂಡಾದ ಸೀರೆಯ ತುಂಡನ್ನು ಪೊಲೀಸರು ಅಮಾನತ್ತುಪಡಿಸಿಕೊಂಡರು. ಸದರಿ ಸೀರೆಯ ತುಂಡನ್ನು ನೋಡಿದರೆ ಗುರುತಿಸಬಲ್ಲೆ.

ಈ ಹಂತದಲ್ಲಿ ಮುಂದಿನ ಮುಖ್ಯ ವಿಚಾರಣೆಯನ್ನು ಸರ್ಕಾರಿ ಅಭಿಯೋಜಕರ ಕೋರಿಕೆಯ ಮುಂದೂಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.